ನಿರ್ಮೂಲನಾ ಮಂಡಳಿ ಬಹಳ ಪ್ರಯತ್ನ ಪಡುತ್ತಿದ್ದರೂ ಕೂಡ ಇದನ್ನು ನಿರ್ಮೂಲನೆ ಮಾಡುವುದಕ್ಕಾಗುತ್ತಿಲ್ಲ. ಆದ್ದರಿಂದ, ಬಾಂಬೆ ಸಿಸ್ಟಂ ಪ್ರಕಾರ ಮಾಡಲು ಒಂದು ವ್ಯವಸ್ಥೆ ಮಾಡಬೇಕೆಂದಿದ್ದೇವೆ. 7, 8 ಮತ್ತು 9 ರಂದು ಅಧಿಕಾರಿಗಳು ಹಾಗೂ ನಾವೆಲ್ಲರೂ ಬಾಂಬೆಗೆ ಹೋಗುತ್ತಿದ್ದೇನೆ. ಅಲ್ಲಿ ಯಾವ ರೀತಿಯಿದೆ ಎಂದರೆ, ಅಲ್ಲಿ ಸರ್ಕಾರಕ್ಕೆ ಯಾವುದೇ ರೀತಿಯ ಫೈನ್ಯಾನ್ಷಿಯಲ್ ಬರ್ಡನ್ ಬರುವುದಿಲ್ಲ. ಶೇಕಡಾ 50ರಷ್ಟು ಅವರೇ ಕೊಟ್ಟು, ಶೇಕಡಾ 50 ರಷ್ಟು ಫ್ರೀ ಆಗಿ ಕಟ್ಟಿಕೊಳ್ಳತಕ್ಕಂಥ ವ್ಯವಸ್ಥೆ ಅಲ್ಲಿದೆ. ವಾಂಚಿ ಸಿಸ್ಟಂನಲ್ಲಿ ನಾವು ಕಟ್ಟುತ್ತಿದ್ದೇವೆ. ಮತ್ತು ಪ್ರೈವೇಟ್‌ನವರ ಜೊತೆ ಜಾಯಿಂಟ್ ವೆಂಚರ್‌ನಲ್ಲಿಯೂ ಮಾಡುತ್ತಿದ್ದೇವೆ. ಆ ರೀತಿ ಮಾಡುವುದರಿಂದ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಬಹುದು. ಇದರ ಹೊರತು, ಅಷ್ಟೊಂದು ಹಣವನ್ನು ತರಲು ಸರ್ಕಾರಕ್ಕೆ ಸಂಪನ್ಮೂಲಗಳಿಲ್ಲ. ಬಾಂಬೆಯಲ್ಲಿ ಯಾವ ರೀತಿ ಮಾಡಿದ್ದಾರೆನ್ನುವ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಮತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ಮಾಡಿ ಅಲ್ಲಿ ಡೆಮೋ ಮಾಡಿ, ಬಾಂಬೆ, ದೆಹಲಿ ಮತ್ತು ಕಲ್ಕತ್ತಾಗಳಲ್ಲಿ ಯಾವ ರೀತಿ ಅಭಿವೃದ್ಧಿ ಪಡಿಸಿದ್ದಾರೋ ಆ ರೀತಿ ಅಭಿವೃದ್ಧಿಪಡಿಸಬೇಕು ಎನ್ನತಕ್ಕಂಥಾದ್ದಕ್ಕೆ ಸರ್ಕಾರ ಕಟ್ಟಿಬದ್ದವಾಗಿದೆ. ಇನ್ನು ಕೆಲವೇ ದಿವಸಗಳಲ್ಲಿ ಬೆಂಗಳೂರು ನಗರದ ಎಲ್ಲಾ ಮಾನ್ಯ ಶಾಸಕರುಗಳನ್ನು ಕರೆದು ಚರ್ಚೆ ಮಾಡಿ, ಬೆಂಗಳೂರಿನಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿಯನ್ನು ಯಾವ ರೀತಿ ಮಾಡಬಹುದು ಎನ್ನುವ ಬಗ್ಗೆ ಪ್ರಮಾಣಿಕ ಪ್ರಯತ್ನ ಮಾಡುತ್ತೇವೆ ಎನ್ನುವ ವಿಚಾರವನ್ನು ಈ ಸಂದರ್ಭದಲಿ ಹೇಳುತ್ತೇನೆ.

ಕೊಳ್ಳೆಗಾಲ ವಿಧಾನಸಭಾ ಕ್ಷೇತ್ರದಲ್ಲಿನ ವಸತಿ ರಹಿತರಿಗೆ ವಸತಿ / ನಿವೇಶನಗಳನ್ನು ನೀಡುವುದು.

105(222); ಶ್ರೀ ಬಾಲರಾಜ್ ಎಸ್.(ಕೊಳ್ಳೆಗಾಲ); ಮಾನ್ಯ ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಕೊಳ್ಳೇಗಾಲ ಕ್ಷೇತ್ರದ ಯಳಂದೂರು ಮತ್ತು ಕೊಳ್ಳೇಗಾಲದಲ್ಲಿ ವಸತಿ ಹಾಗೂ ನಿವೇಶನ ಇಲ್ಲದವರ ಹಾಗೂ ನಿವೇಶನ ಇಲ್ಲದವರ ಅತಿ ಬಡ ಜನರ ಪ್ರಮಾಣ ಹೆಚ್ಚಿನ ಸಂಖ್ಯೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಸತಿ/ನಿವೇಶನ ರಹಿತರ ಸಮೀಕ್ಷೆಯನ್ನೇನಾದರೂ ಮಾಡಲಾಗಿದೆಯೇ;

ಇ) ಯಾವ ಯಾವ ಯೋಜನೆಗಳಡಿ ಎಷ್ಟು ವಸತಿ/ನಿವೇಶನ ನೀಡಲು ಉದ್ದೇಶಿಸಲಾಗಿದೆ;

ಈ) ಎಷ್ಟು ವರ್ಷಗಳ ಅವಧಿಯಲ್ಲಿ ಈ ಕೊರತೆಯನ್ನು ನೀಗಿಸಲಾಗುವುದು;

ಉ) 2005–06ನೇ ಸಾಲಿನಲ್ಲಿ ಎಷ್ಟು ಮನೆಗಳನ್ನು ನೀಡಲಾಗಿದೆ ಮತ್ತು ನೀಡಬಹುದಾಗಿದೆ; ಮನೆ ಕಟ್ಟಿಸಿಕೊಡಲು ಇರುವ ತೊಡಕುಗಳೇನು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು)

ಅ,ಆ) ಜೂನ್–2003ರಲ್ಲಿ ವಸತಿರಹಿತ ಮತ್ತು ನಿವೇಶನರಹಿತರ ಸಮೀಕ್ಷೆ ನಡೆಸಲಾಗಿದ್ದು, ಅದರಂತೆ ಕೊಳ್ಳೇಗಾಲ ಕ್ಷೇತ್ರದ ಯಳಂದೂರು ಮತ್ತು ಕೊಳ್ಳೇಗಾಲದ ಗ್ರಾಮೀಣ ಪ್ರದೇಶದಲ್ಲಿ 7417 ವಸತಿ ರಹಿತರು ಮತ್ತು 10409 ನಿವೇಶನ ರಹಿತರು ಇರುತ್ತಾರೆ.

ಜೂನ್–2003 ನಗರ ಸ್ಥಳೀಯ ಸಂಸ್ಥೆಗಳ ಮೂಲಕ ವಸತಿರಹಿತರ ಮತ್ತು ನಿವೇಶನರಹಿತರ ಸಮೀಕ್ಷೆ ನಡೆಸಲಾಗಿದ್ದು, ಅದರಂತೆ ಕೊಳ್ಳೇಗಾಲ ಕ್ಷೇತ್ರದ ಯಳಂದೂರು ಮತ್ತು ಕೊಳ್ಳೇಗಾಲದ ನಗರ ಪ್ರದೇಶದಲ್ಲಿ 298 ವಸತಿ ರಹಿತರು ಮತ್ತು 2369 ನಿವೇಶನ ರಹಿತರು ಇರುತ್ತಾರೆ.

ಇ) 2003ರಲ್ಲಿ ನಡೆದ ಮೇಲ್ಕಂಡ ಸಮೀಕ್ಷೆಯ ನಂತರ ಅಂದರೆ, 2003–2004 ರಿಂದ 2005–2006ರ ವರೆಗೆ ವಿವಿಧ ಯೋಜನೆಗಳಡಿಯಲ್ಲಿ ಕೊಳ್ಳೇಗಾಲ ಕ್ಷೇತ್ರದ ಯಳಂದೂರು ಮತ್ತು ಕೊಳ್ಳೇಗಾಲದಲ್ಲಿ ನೀಡಿರುವ ಗುರಿಯ ಯೋಜನಾವಾರು ವಿವರವನ್ನು ಈ ಕೆಳಗಿನಂತೆ ನೀಡಲಾಗಿದೆ.

ಮನೆಗಳ ಗುರಿ

ಕ್ರ. ಸಂ.	ಯೋಜನೆ	ನೀಡಲಾದ ಗುರಿ
1	ಗ್ರಾಮೀಣ ಆಶ್ರಯ	2048
2	ಗ್ರಾಮೀಣ ಅಂಬೇಡ್ಕರ್	573
3	ನಗರ ಆಶ್ರಯ	460
4	ಇಂದಿರಾ ಅವಾಸ್	1020
5	ಪ್ರಧಾನ ಮಂತ್ರಿ ಗ್ರಾಮೀಣ ಅವಾಸ್ ಯೋಜನೆ	56
	ಒಟ್ಟು	4157

ನಿವೇಶನಗಳ ಯೋಜನೆಡಿ ಹಂಚಿಕೆ

ಗ್ರಾಮೀಣ ನಿವೇಶನ ಯೋಜನೆ

ಗ್ರಾಮೀಣ ನಿವೇಶನ ಯೋಜನೆಯಡಿಯಲ್ಲಿ 2003 ರಿಂದ ಇದುವರೆಗೆ ಈ ಕ್ಷೇತ್ರಗಳಲ್ಲಿ ಯಾವುದೇ ನಿವೇಶನ ಹಂಚಿಲ್ಲ.

ನಗರ ನಿವೇಶನ ಯೋಜನೆ

ನಗರ ನಿವೇಶನ ಯೋಜನೆಯಡಿಯಲ್ಲಿ ಈ ಕ್ಷೇತ್ರಗಳಲ್ಲಿ 2003 ರಿಂದ ಇದುವರೆಗೆ ಒಟ್ಟು 492 ನಿವೇಶನಗಳನ್ನು ಹಂಚಲಾಗಿದೆ.

ಈ) ಆದಷ್ಟು ಶೀಘ್ರವಾಗಿ ಕೊರತೆಯನ್ನು ನೀಗಿಸಲಾಯಿತು.

ಉ) 2005–2006 ರಲ್ಲಿ ಕೊಳ್ಳೆಗಾಲ ಕ್ಷೇತ್ರದ ಯಳಂದೂರು ಮತ್ತು ಕೊಳ್ಳೇಗಾಲದಲ್ಲಿ ಈ ಕೆಳಗಿನಂತೆ ಮನೆಗಳ ಗುರಿಯನ್ನು ನೀಡಲಾಗಿದೆ.

ಕ್ರ ಸಂ.	ಯೋಜನೆ	ನೀಡಲಾದ ಗುರಿ
1	ಗ್ರಾಮೀಣ ಆಶ್ರಯ	1480
2	ಗ್ರಾಮೀಣ ಅಂಬೇಡ್ಕರ್	300
3	ನಗರ ಆಶ್ರಯ	430
4	ಇಂದಿರಾ ಅವಾಸ್	649
	ಒಟ್ಟು	**2859**

ಮೇಲ್ಕಂಡ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳಡಿಯಲ್ಲಿ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ವಿವರವಾದ ಮಾರ್ಗಸೂಚಿಯನ್ನು ಅನುಷ್ಠಾನಾಧಿಕಾರಿಗಳಿಗೆ ತಿಳಿಸಲಾಗಿದ್ದು, ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಸಭೆಗಳ ಮೂಲಕ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ನಿಯಮಾನುಸಾರ ಪೂರ್ಣಗೊಂಡ ನಂತರ ದಾಖಲೀಕರಣ ಪೂರ್ಣಗೊಳಿಸಿ, ಫಲಾನುಭವಿಗಳಿಗೆ ಕಾಮಗಾರಿ ಆದೇಶವನ್ನು ನೀಡಿ ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಲಾಗುವುದು.

ಇಂದಿರಾ ಅವಾಸ್ ಯೋಜನೆಯಡಿ ನೀಡಲಾದ 649 ಗುರಿಯಲ್ಲಿ 129 ಮನೆಗಳನ್ನು ಪೂರ್ಣಗೊಳಿಸಿದ್ದು, ತಳಪಾಯ 320, ಗೋಡೆ ಹಂತ 96 ಮತ್ತು ಛಾವಣಿ 52 ಹೀಗೆ ಒಟ್ಟು 468 ಮನೆಗಳು ಪ್ರಗತಿಯಲ್ಲಿವೆ.

ನಗರ ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಮನೆಗಳನ್ನು ನಿರ್ಮಾಣ ಮಾಡಲು ಯಾವುದೇ ತೊಡಲು ಇರುವುದಿಲ್ಲ.

ಶ್ರೀ ಎಸ್.ಬಾಲರಾಜ್: ಉತ್ತರವನ್ನು ಕೊಟ್ಟಿದ್ದಾರೆ. ಈ ಒಂದು ಅಂಕಿಅಂಶಗಳನ್ನು ನೋಡಿದರೆ ನಿಜಕ್ಕೂ ಸಂಕಟವಾಗುತ್ತದೆ. ಎಷ್ಟು ವರ್ಷಗಳ ಅವಧಿಯಲ್ಲಿ ಈ ಕೊರತೆಯನ್ನು ನೀಗಿಸಲಾಗುವುದು ಎಂದು ಒಂದು ಪ್ರಶ್ನೆ ಕೇಳಿದ್ದೇನೆ. ಆದಷ್ಟು ಶೀಘ್ರವಾಗಿ ಮನೆಗಳ ಕೊರತೆಯನ್ನು ನೀಗಿಸಲಾಗುವುದು

ಎಂದು ಉತ್ತರ ಕೊಟ್ಟಿದ್ದಾರೆ. ಆದಷ್ಟು ಶೀಘ್ರ ಎಂದರೆ ಎಷ್ಟು ಅವಧಿ ಬೇಕಾಗಬಹುದು? ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ 2003ನೇ ಇಸವಿಯಲ್ಲಿ ಒಂದು ಸಮೀಕ್ಷೆ ಮಾಡಿದ್ದಾರೆ. ಅದರ ಪ್ರಕಾರ, ಮನೆಯಿಲ್ಲದವರು 7,417, ನಿವೇಶನಯಿಲ್ಲದವರು 10,409 ಜನರು, ನನ್ನ ಕ್ಷೇತ್ರದ ಪಟ್ಟಣ ಮತ್ತು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥವರು ಎಲ್ಲಾ ಸೇರಿ ಒಟ್ಟು 20,393 ಜನರಿಗೆ ನಿವೇಶನ ಇಲ್ಲ. ಮನೆ ಇಲ್ಲ. ಇಂಥ ಪರಿಸ್ಥಿತಿ ಉದ್ಭವವಾಗಿದೆ. ನನ್ನ ಕ್ಷೇತ್ರದಲ್ಲಿ ಮತದಾರರ ಸಂಖ್ಯೆ ಮತ್ತು ಅಲ್ಲಿರತಕ್ಕಂಥ ಅಂಕಿಅಂಶಗಳ ಸರಾಸರಿ ತೆಗೆದುಕೊಂಡರೆ ಸುಮಾರು 37 ರಿಂದ 40 ಸಾವಿರ ಮನೆಗಳಿರಬಹುದು. ಅದರಲ್ಲಿ ಶೇಕಡ 25 ರಿಂದ 30 ಸ್ವಂತ ಮನೆ ಹೊಂದಿರತಕ್ಕಂಥ ಜನರು ಇರಬಹುದು. ಅಂದರೆ ಬಹುತೇಕ ಇಲ್ಲಿಯೇ 21 ಸಾವಿರ ಆಯಿತು. ಸ್ವಂತ ಮನೆ ಕಟ್ಟಿಕೊಂಡಿರುವವರು 10 ಸಾವಿರ ಅಥವಾ 12 ಸಾವಿರ ಅಥವಾ 13 ಸಾವಿರ ಇರಬಹುದು. ಇಷ್ಟು ಹೊರತುಪಡಿಸಿದರೆ ಇತಿಹಾಸದಲ್ಲಿ ಇದುವರೆಗೆ ಕೇವಲ 7 ಸಾವಿರ ಮನೆಗಳನ್ನು ಮಾತ್ರ ಕೊಟ್ಟಿರುವುದೇ? ಅಂದರೆ ಮನೆಗಳೇನಾದರೂ ಕಳೆದು ಹೋಗುತ್ತಿವೆಯೇ? ಏನಾಗುತ್ತಿದೆ! ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಆದ್ದರಿಂದ ಒಂದು ಕಟ್ಟುನಿಟ್ಟಿನ ಆದೇಶವನ್ನು ತಾವು ಮಾಡಿಸಿ, ಎಷ್ಟು ಮನೆಗಳು, ನಿವೇಶನಗಳನ್ನು ಕೊಡಬೇಕಾಗಿದೆ? ನಿವೇಶನಗಳನ್ನು ಮನೆಗಳನ್ನು ಕೊಡುವುದಕ್ಕೆ ನಾವು ಕಂಕಣಬದ್ಧವಾಗಿ ಎಷ್ಟು ವರ್ಷಗಳಲ್ಲಿ ಕೊಡುತ್ತೇವೆನ್ನುವ ತೀರ್ಮಾನವಾಗಬೇಕು. ಈ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಒಂದು ಮಾನದಂಡವನ್ನು ಅನುಸರಿಸಿ, ಒಂದೇ ಸಲಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ನೀವು instal ment ನಲ್ಲಿ ಕೊಟ್ಟ ಹಾಗೆ ಮನೆಗಳನ್ನು ಕೊಡಿ.

ಅಧ್ಯಕರು: ಪ್ರಶ್ನೆ ಇದ್ದರೆ ಕೇಳಿ. ನೀವು ಹೀಗೆ ಭಾಷಣ ಮಾಡಿದರೆ ಹೇಗೆ?

ಶ್ರೀ ಎಸ್.ಬಾಲರಾಜ್: ಮಾನ್ಯ ಅಧ್ಯಕ್ಷರೆ, ಇದು ಜಟಿಲವಾದ ಸಮಸ್ಯೆಯಾಗಿದೆ. ನನ್ನ ಇಡೀ ಕ್ಷೇತ್ರದಲ್ಲಿ ಇದುವರೆಗೂ ಪ್ರತಿ ಐದು ವರ್ಷಕ್ಕೊಂದು ಸಲ ಹತ್ತತ್ತು ಸಾವಿರ ಮನೆಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಇಲ್ಲಿ ಕೊಟ್ಟಿರುವ ಅಂಕಿಅಂಶದ ಬಗ್ಗೆ ಗಮನಿಸಿದಾಗ ಇದುವರೆಗೆ ಕೇವಲ 7 ಸಾವಿರ ಮನೆಗಳನ್ನು ಮಾತ್ರ ಕೊಡಲಿಕ್ಕೆ ಸಾಧ್ಯವಾಗಿರುವಂಥದ್ದು ಆಗಿದೆ. ಉಳಿಕೆ ಮನೆಗಳು ಎಲ್ಲಿ ಹೋಗಿವೆ? ಬಡವರಿಗೆ ತಲುಪುತ್ತಿದೆಯೇ? ನಾನು ಮಾನ್ಯ ವಸತಿ ಸಚಿವರಲ್ಲಿ ಕೇಳುವುದೇನೆಂದರೆ, ತಾವು ಏನು 25 ಸಾವಿರ ರೂ.ಕೊಡುತ್ತೇವೆಂದು ಹೇಳಿದ್ದೀರಿ, ಈ ಸಾರಿ 5 ಸಾವಿರ ರೂ.

ಜಾಸ್ತಿ ಮಾಡಿರುವುದು ಸಂತೋಷದ ವಿಚಾರವಾಗಿದೆ. ಆದರೆ 5 ಸಾವಿರ ರೂಪಾಯಿಗಳನ್ನು ನೀವು ಕೊಡುವುದಕ್ಕೆ ಮುಂಚೆ foundation ಹಾಕಿ ಎಂದು ಹೇಳುತ್ತಾರೆ. 5 ಸಾವಿರ ರೂ.ನಲ್ಲಿ foundation ಹಾಕುವುದಿದ್ದರೆ ಬಡವ ಎಲ್ಲಿ ಮನೆ ಕಟ್ಟುವುದಕ್ಕಾಗುತ್ತದೆ? ದಯಮಾಡಿ ಅದನ್ನು ಸಡಿಲಪಡಿಸಿ ಅವರು foundation ಹಾಕುವ ಹಂತದಲ್ಲಿ ನಾವು 2 ರಿಂದ 5 ಸಾವಿರ ರೂಪಾಯಿಗಳನ್ನು ಕೊಡತಕ್ಕಂಥ ಕೆಲಸಕ್ಕೆ ಅದನ್ನು ಉಸ್ತುವಾರಿ ಕೊಟ್ಟು ಹಣವನ್ನು ಅವರಿಗೆ ಮೊದಲನೇ ಹಂತದಲ್ಲಿಯೇ ಬಿಡುಗಡೆ ಮಾಡಿಕೊಡಬೇಕು. ಹಾಗಾದಾಗ ಮಾತ್ರ ನಿಜವಾದ ಬಡವ ಮನೆ ಕಟ್ಟಿಕೊಳ್ಳುತ್ತಾನೆ. ಇಲ್ಲದಿದ್ದರೆ ಕಡುಬಡವರಿಗೆ ಏನು ವಸತಿ ರಹಿತರು, ನಿವೇಶನ ರಹಿತರಿದ್ದಾರೆ ಅವರಿಗೆ ಮನೆ ಕೊಡಲು ಸಾಧ್ಯವಿಲ್ಲ. ಹಾಗಾಗಿ ಮಾನ್ಯ ವಸತಿ ಸಚಿವರು ಈ ವಿಷಯದಲ್ಲಿ ಒಂದು ಸ್ಪಷ್ಟ ನಿರ್ದೇಶನವನ್ನು ಸಂಬಂಧಪಟ್ಟವರಿಗೆ ನೀಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಅಧ್ಯಕ್ಷರೆ, ಈ ವಸತಿರಹಿತ ಮತ್ತು ನಿವೇಶನರಹಿತ ಇವೆರಡರ ಬಗ್ಗೆ ಜೂನ್ 2003ರಲ್ಲಿ ಒಂದು ಸಮೀಕ್ಷೆಯನ್ನು ಇಡೀ ಕರ್ನಾಟಕಾದ್ಯಂತ ಮಾಡಿದ್ದೇವೆ. ಆ ಪ್ರಕಾರ ಕೊಳ್ಳೆಗಾಲದಲ್ಲಿ ಕೂಡ ಮಾಡಿದ್ದೇವೆ. ಅದೇ ರೀತಿ ಯಳಂದೂರಿನಲ್ಲಿ ಕೂಡ ಮಾಡಿದ್ದೇವೆ. ಕೊಳ್ಳೆಗಾಲದಲ್ಲಿ ಇದುವರೆಗೆ ಕೂಡ 298 ವಸತಿರಹಿತರು, ಮತ್ತು 2369 ನಿವೇಶನರಹಿತರು ಇರುತ್ತಾರೆ. ಇದರಲ್ಲಿ ಹಿಂದೆ ಎಲ್ಲಾ ಕಟ್ಟಿಸಿದ್ದೇಲ್ಲ ಎಲ್ಲಿಗೆ ಹೋಯಿತು. ಎಂದು ಅವರು ಕೇಳುತ್ತಾರೆ. ಈ ಪ್ರಶ್ನೆಯನ್ನು ಅವರು ಇದರಲ್ಲಿ ಕೇಳಲಿಲ್ಲ. ಆ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಅವರೇ ಉತ್ತರ ಹೇಳಬೇಕು. ಏಕೆಂದರೆ, ಅವರು ಕೂಡ ಶಾಸಕರಾಗಿದ್ದಾರೆ. ಅವರು ಹಿಂದಿನ ಆಶ್ರಯ ಸಮಿತಿಯ ಅಧ್ಯಕ್ಷರಾಗಿದ್ದರು. 2003ರಲ್ಲಿ ಏನು ಸಮೀಕ್ಷೆ ನಡೆದಿದೆ. ಆ ಸಮೀಕ್ಷೆ ಅನುಸಾರವಾಗಿ ಒಂದು ಕಡೆ ಸಮೀಕ್ಷೆ ಮಾಡುತ್ತಿರುತ್ತೇನೆ. ಇನ್ನೊಂದು ಕಡೆ ಮನೆಗಳ ಬೇಡಿಕೆ ಕೂಡ ಜಾಸ್ತಿಯಾಗುತ್ತಿರುತ್ತದೆ. ಇದಕ್ಕೂ ಅದಕ್ಕೂ tally ಆಗುತ್ತಿಲ್ಲ. ಈಗ 10 ಸಾವಿರ ಮನೆಗಳು ಬೇಕೆಂದಾದ್ರೆ ಮುಂದಿನ ವರ್ಷಕ್ಕೆ 20 ಸಾವಿರ ಮನೆಗಳು ಬೇಕು. ಇವತ್ತು ಒಂದು ಶಾಲೆ ಕಟ್ಟಿಸಿರುತ್ತೇವೆ. ಮುಂದಿನ ಸಾರಿ 4 ಶಾಲೆಗಳನ್ನು ಕಟ್ಟಬೇಕಾಗುತ್ತದೆ. ಇದು ಜನಸಂಖ್ಯಾ ಅಸ್ಫೋಟದಿಂದ ಆಗುತ್ತಿರತಕ್ಕಂಥ ಈ ವ್ಯತ್ಯಾಸಗಳಾಗಿರುತ್ತವೆ. ಯಾವುದೇ ಸರ್ಕಾರ ಬರಲಿ. ನಿವೇಶನರಹಿತರಿಗೆ ಕೊಡಬೇಕೆನ್ನುವುದು ಸರ್ಕಾರದ ಉದ್ದೇಶ. ಆದರೆ ಈ ಬೆಳವಣಿಗೆ ಅಂಜನೇಯನ ಬಾಲ ಬೆಳೆದ ಹಾಗೆ ಬೆಳೆದುಕೊಂಡು ಹೋಗುತ್ತಲೇ

ಇರುತ್ತದೆ. ಅದಕ್ಕಾಗಿ ಈಗ ಒಂದು deadline ಅನ್ನು ಇಟ್ಟುಕೊಂಡು 2003ರ ಸಮೀಕ್ಷೆ ಪ್ರಕಾರ ನಾವು ಯಾರ್ಯಾರಿಗೆ ಮನೆ ಕಟ್ಟಿಕೊಡಬೇಕೋ, ಅವರಿಗೆ ಮನೆ ಕಟ್ಟಿಕೊಳ್ಳಲಿಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಈ ಸಾರಿ ಅಂದರೆ 2006–07ನೇ ಇಸವಿಗೆ ಸುಮಾರು 3 ಲಕ್ಷ ಮನೆಗಳನ್ನು ಕಟ್ಟಿಸಬೇಕೆನ್ನುವ ಗುರಿಯನ್ನಿಟ್ಟುಕೊಂಡಿದ್ದೇವೆ. ಆ ಗುರಿಯನ್ನು ನಾವು ತಲುಪಿಯೇ ತಲುಪುತ್ತೇವೆನ್ನತಕ್ಕಂಥ ಒಂದು ಭರವಸೆ ಕೂಡ ಇದೆ. ಅಕಸ್ಮಾತ್ ಹೆಚ್ಚಾಗಿ ಬೇಕಾಗಿದ್ದರೂ ಕೂಡ, ಹೆಚ್ಚಾಗಿ ಕೂಡ ಏನಾದರೂ ಬೇಡಿಕೆ ಇದ್ದರೆ ಅಲ್ಲೂ ಕೂಡ ಮನೆಗಳನ್ನು ಕಟ್ಟಿಕೊಡಲಿಕ್ಕೆ ಸರ್ಕಾರದಲ್ಲಿ ಸಂಪನ್ಮೂಲ ಇದೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಹುಕ್ಕೇರಿ ಮತಕ್ಷೇತ್ರದಲ್ಲಿ ಏತ ನೀರಾವರಿ ಯೋಜನೆಗಳ ಪ್ರಸ್ತಾವನೆಯನ್ನು ಅನುಮೋದಿಸುವುದು.

21; ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ(ಹುಕ್ಕೇರಿ) ಮಾನ್ಯ ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನೂಲ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ) ಹುಕ್ಕೇರಿ ಮತ ಕ್ಷೇತ್ರ ವ್ಯಾಪ್ತಿಯಡಿಯಲ್ಲಿ ಅಭಿವೃದ್ಧಿಯಲ್ಲಿರುವ ಏತ ನೀರಾವರಿ ಯೋಜನೆಗಳು ಯಾವುವು?

ಆ) ಅವು ಯಾವ ಯಾವ ಹಂತದಲ್ಲಿವೆ ಹಾಗೂ ಅವುಗಳ ಯೋಜನಾ ವೆಚ್ಚವೆಷ್ಟು

ಇ) ಪ್ರತಿ ಯೋಜನೆಗೆ ಇದುವರೆಗೆ ಬಿಡುಗಡೆಗೊಳಿಸಲಾದ ಹಣವೆಷ್ಟು,

ಈ) ಯಾವ ಯಾವ ಯೋಜನೆಗಳು ಯಾವ ಯವ ನಿರ್ದಿಷ್ಟ ಅವಧಿಗೆ ಪೂರ್ಣಗೊಳಿಸಲಾಗುತ್ತಿದೆ.

ಉ) ಹುಕ್ಕೇರಿ ಮತ ಕ್ಷೇತ್ರ ವ್ಯಾಪ್ತಿಯಯಲ್ಲಿ ಬರುವ ಕರಗಾಂವ ಏತ ನೀರಾವರಿ ಯೋಜನೆಯ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಈ ಯೋಜನೆಯ ಪ್ರಸ್ತಾವನೆಯನ್ನು ಸರ್ಕಾರ ಯಾವಾಗ ಮತ್ತು ಎಷ್ಟು ದಿನಗಳಲ್ಲಿ ಮಂಜೂರು ಮಾಡುತ್ತದೆ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನೂಲ ಸಚಿವರು)

ಅ) ಹುಕ್ಕೇರಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ರುಸ್ತುಂಪುರ ಕೊಡಬಾಗಿ ಮತ್ತು ಹಿರಣ್ಯಕೇಸಿ ಏತ ನೀರಾವರಿ ಯೋಜನೆಗಳು ಪ್ರಗತಿಯಲ್ಲಿರುತ್ತವೆ.

ಆ) ಪ್ರಗತಿಯಲ್ಲಿರುವ ಯೋಜನೆಗಳ ವಿವರವು ಈ ಕೆಳಗಿನಂತಿದೆ;